ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 1, March-April 2026, Pp. 136-140
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಶರಣರು

**ಶಕುಂತಲ ಸಿ.ಎಸ್**

ಅತಿಥಿ ಉಪನ್ಯಾಸಕರು, ತತ್ತ್ವಶಾಸ್ತ್ರ ಅಧ್ಯಯನ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು.

***Abstract:***

*'ಅರಿದರೆ ಶರಣ, ಮರೆದರೆ ಮಾನವ' ಎಂಬ ಸೂತ್ರ ರೂಪದ ಉಕ್ತಿಯಲ್ಲಿ ನಮ್ಮಲ್ಲಿ ಉದ್ಭವಿಸಬಹುದಾದ ಆಧ್ಯಾತ್ಮಿಕ ಜಿಜ್ಞಾಸೆಗಳಾದ ನಾನು ಯಾರು? ಈ ಜಗತ್ತಿಗೂ ನನಗೂ ಇರುವ ಸಂಬಂಧವನ್ನು ಅರಿಯುವುದು ಹೇಗೆ? ನನಗೂ ಜಗತ್ತಿಗೂ ಮೂಲವಾದದ್ದು ಏನು? ಅರಿಯಬೇಕಾದದ್ದು ಏನು? ಅರಿತಿರುವುದು ಯಾವುದನ್ನು? ಹೀಗೆ ಆಧ್ಯಾತ್ಮಿಕ ಜಿಜ್ಞಾಸೆಯ ಪ್ರಶ್ನೆಗಳ ಹಾದಿಯಲ್ಲಿ ಜೀವ-ಜಗತ್ತು-ದೇವರು ಈ ಮೂರನ್ನು ಅರಿಯುವುದೆ ಆಧ್ಯಾತ್ಮ. ಆಧ್ಯಾತ್ಮವಿದ್ಯೆ, ಆಧ್ಯಾತ್ಮಿಕತೆ. ಇವು ಹಿಂದೂ ವೈದಿಕ ತತ್ವಜ್ಞಾನದ ಚರ್ಚೆಯ ರೂಪುರೇಷೆಗಳು. ಆಧ್ಯಾತ್ಮಿಕ ಸಾಧಕರೂ, ಸಮಾಜ ಸುಧಾರಕರೂ ಆದ ಅನುಭಾವಿಗಳು ಇವುಗಳ ಚಿಂತನೆಯನ್ನು ನಡೆಸಿದ್ದಾರೆ. ಪ್ರಸ್ತುತ ಲೇಖನದಲ್ಲಿ ಶರಣರನ್ನು ಕುರಿತು ಅಧ್ಯಯನ ಮಾಡಲಾಗಿದೆ.*

***Keywords:*** *ತತ್ತ್ವಶಾಸ್ತ್ರ, ಆಧ್ಯಾತ್ಮಿಕತೆ, ಸಮಾಜ ಸುಧಾರಕರು, ಹನ್ನೆರಡನೆ ಶತಮಾನ, ಶಿವಶರಣರು. ಅಲ್ಲಮಪ್ರಭು, ಬಸವಣ್ಣ*

## ಪೀಠಿಕೆ

ದೈವತ್ವದ ಕಲ್ಪನೆಯನ್ನು ಮನುಷ್ಯನ ಶರೀರಕ್ಕೆ ಆತನು ಧರಿಸಬೇಕಾದ ಇಷ್ಟಲಿಂಗಕ್ಕೆ ಸ್ಥಳಾಂತರಿಸಿದವರು ಶಿವಶರಣರು. ದೇವಸ್ಥಾನಗಳನ್ನು ಪುರೋಹಿತಶಾಹಿ ಪ್ರವೃತ್ತಿಯ ಕೇಂದ್ರಸ್ಥಾನ ಮಾಡಿಕೊಂಡದ್ದನ್ನು ತೀವ್ರವಾಗಿ ಖಂಡಿಸಿದರು. ಎಷ್ಟೋ ಅನುಭಾವಿಕ ವಿಚಾರಗಳು ಈ ಕಾಲಘಟ್ಟದ ಅನುಭಾವಿ ಶಿವಶರಣರ ವಿಚಾರಗಳ ನೆನಪಿನ ಬುತ್ತಿಯಾಗಿವೆ ಹಾಗೂ ಸಮೃದ್ಧವಾದ ಸ್ವಾರಸ್ಯದ ಸಂಗತಿಯಾಗಿವೆ. ಪ್ರಕೃತಿಯ ಮಡಿಲಲ್ಲಿ ಬದುಕಿದ ಇವರಿಗೆ ಭಗವಂತನ ಅರಿವು ಮತ್ತು ಅವರು ಗಳಿಸಿದ ಅನುಭಾವಮೃತವೇ ಅನುಪಮ ಸಿರಿಯಾಗಿದೆ. ಅನುಭಾವಿಗಳ ಜೀವನ ಕ್ರಮವು ಸರಳ, ಸುಂದರ, ಸಾತ್ವಿಕ. ಸಾವಿರಾರು ವರ್ಷಗಳ ಇತಿಹಾಸ ದೇಶದ ಸಂತರು. ಋಷಿಗಳು ಹಾಗೂ ಶರಣರಿಗೆ ಇದೆ. ಭಾರತಕ್ಕೆ ಆಧ್ಯಾತ್ಮಿಕ ಮತ್ತು ಅಲೌಕಿಕ ಗೌರವ ತಂದುಕೊಟ್ಟವರ ಪೈಕಿ ಶಿವಶರಣರಿಗೆ ಸ್ಥಾನವಿದೆ. ಶಿವಭಕ್ತರಾರು? ಮತ್ತು ಅವರ ಲಕ್ಷಣಗಳೇನು? ಎಂದು ಸ್ಥೂಲವಾಗಿ ಚರ್ಚಿಸಿದಾಗ ಅರಿದಡೆ ಶರಣ, ಮರೆದಡೆ ಮಾನವ ಎಂಬ ಶರಣ ಸಂದೇಶದಲ್ಲಿ ಸುಖ-ಶಾಂತಿಗಳಿಂದ ಕೂಡಿದ ಜೀವನವನ್ನು ಮರವೆಯಿಂದ ಮುಕ್ತನಾಗಿ ಜೀವನದ ಅರ್ಥ ಹಾಗೂ ದೇವರ ಇರುವಿಕೆಯ ಪಾತ್ರದ ಮಹತ್ವವನ್ನು ಅರಿತು ಆಚರಿಸುವುದೇ ಅನುಭಾವಿ. ಅದನ್ನು ಆಚರಿಸುವವನೇ ಅನುಭಾವಿ ಎಂಬ ಸಂಗತಿ ಮನದಟ್ಟಾಗುತ್ತದೆ. ಪೌರಾತ್ಯ ಮತ್ತು ಪಾಶ್ಚಿಮಾತ್ಯ ಭೌತಿಕ ಜೀವನವನ್ನು ಕಂಡಾಗ ಇಂದಿನ ಸಮಾಜಕ್ಕೆ

***Please cite this article as:*** ಶಕುಂತಲ, ಸಿ.ಎಸ್. (2026). ಶರಣರು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 5(1), 136–140

ಈ ಶರಣರು ಸಾರಿದ ಮೌಲ್ಯಗಳ ಅವಶ್ಯಕತೆ ಇದೆಯೇ ಎಂಬ ಪ್ರಶ್ನೆ ಎದುರಾಗುತ್ತದೆ. ಇಂದು ಬದಲಾದ ಜೀವನ ಮೌಲ್ಯಗಳ ಮುಖ್ಯ ಕಾರಣವಾಗಿರುವುದು ಸುಖ–ಭೋಗಗಳಿಂದ ಕೂಡಿದ ಜೀವನ ದೃಷ್ಟಿ, ಸತ್ಯ, ಸೌಂದರ್ಯ, ಶಾಂತಿಯ ಕೊರತೆ, ಹಾಗೂ ಹಣ, ಭೋಗ, ಅಧಿಕಾರ, ಮೋಸ, ವಂಚನೆಗಳ ತಾಂಡವ ನೃತ್ಯಗಳು ನೈತಿಕ ಜೀವನ, ಹೃದಯವಂತಿಕೆ, ಅನುಕಂಪ ಇವೆಲ್ಲವನ್ನೂ ಹೇಳ ಹೆಸರಿಲ್ಲದಂತೆ ಮರೆಯಾಗಿಸುತ್ತಿವೆ. ಈ ಎಲ್ಲವುಗಳು ಮತ್ತೆ ಮರುಕಳಿಸಬೇಕಾದರೆ ಶರಣರ ಜೀವನ ಮೌಲ್ಯಗಳಾದಂತಹ ಪಂಚಾಚಾರ, ಲಿಂಗಾಚಾರ, ಇಷ್ಟಲಿಂಗ ಪೂಜೆ, ಸಮಾನತೆ, ಐಕ್ಯತೆಯ ಕುರುಹು, ಸದಾಚಾರ, ಸತ್ಯ, ಶುದ್ಧ, ಕಾಯಕ ತತ್ವ, ಶಿವಾಚಾರ ಶರಣರ ಸಚ್ಚಾರಿತ್ರ್ಯಗಳು ಮುನ್ನೆಲೆಗೆ ಬರಬೇಕು. ಏಕದೇವೋಪಾಸನೆ, ದೇಹವೇ ದೇಗುಲ ಎಂಬ ಸತ್ಯ–ನಿತ್ಯದ ಬದುಕಿನಲ್ಲಿ ಅವತರಿಸಬೇಕು. ಒಟ್ಟಿಗೆ ಕೂಡಿ ಬಾಳುವ ಮನೋಭಾವನೆ ಈ ಎಲ್ಲವುಗಳ ಮೇಳೈಸುವಿಕೆಯಿಂದ ಮಾತ್ರ ಸಾಧ್ಯ. ಇವುಗಳನ್ನು ಪ್ರತಿಯೊಂದು ಸಮುದಾಯವು ಅಳವಡಿಸಿಕೊಳ್ಳಬೇಕು. ಇದೇ ಶರಣರ ನೈಜ ಆಶಯವಾಗಿತ್ತು. ಬೇಕೆನಲಾಗದು ಶರಣಂಗೆ ಬೇಡೆನಲಾಗದು ಶರಣಂಗೆ ಬಂದು ಸುಖವನತಿಗಳೆಯಲಾಗದು ಶರಣಂಗೆ ಇದು ಕಾರಣ ಕೂಡಲಚನ್ನಸಂಗಯ್ಯಾ ನಿಮ್ಮ ಶರಣರು ಉಂಡು ಉಪವಾಸಿಗಳು. ಪರುಷ ಮುಟ್ಟಲು ಕಬ್ಬಿಣ ಹೊನ್ನಾದಂತೆ, ಪಾಪ–ಪುಣ್ಯ, ಸ್ವರ್ಗ–ನರಕ, ಬಂಧ–ಮೋಕ್ಷ, ಪ್ರವರ್ತಕ–ವಿವರ್ತಕ ಈ ಯಾವ ಭ್ರಮೆಯೂ ಇಲ್ಲವೆಂದು ಚನ್ನಬಸವಣ್ಣ ನುಡಿದಿದ್ದಾರೆ. ಶರಣನ ಅನುಭಾವ ಸೌಂದರ್ಯದ ಒಳಗುಟ್ಟು ಮಹಾದೇವನಲ್ಲಿ ಒಂದಾಗಿ, ಪರಮಶಾಂತಿ, ಪರಮಾನಂದವನ್ನು ಅನುಭವಿಸುವುದರಲ್ಲಿದೆ. ಶರಣನ ಅನುಪಮ ಸಿರಿ ಅದ್ವಿತೀಯ, ಅನುಪಮ. ಶರಣರು ಬಹಿರಂಗ ಸಿರಿಯನ್ನು ಅಲ್ಲಗೆಳೆದು, ಅಂತರಂಗ ಸಿರಿಗೆ ಹೆಚ್ಚಿನ ಮಹತ್ವವನ್ನು ನೀಡಿದರು. ಉದಾ: ಒಂದು ಮೊಗ್ಗು ಮೈ ಬಿಚ್ಚಿ ಸುಗಂಧ ಸೂಸಿದಾಗ ಆ ಹೂವಿನ ಸೌಂದರ್ಯ ಸುಗಂಧ – ಮಕರಂದದಿಂದ ಹೂವಿಗೆ ಸಂಪೂರ್ಣ ವೈಭವ ಬರುತ್ತದೆ. ಅದೇ ರೀತಿ ಮಾನವನ ಹೃದಯದ ಕಮಲವು ಅರಳಿದರೆ ಅನುಭಾವದ ಸೌಂದರ್ಯ ತುಂಬಿಕೊಳ್ಳುತ್ತದೆ. ಆಗ ಅಂತರಂಗದ ಸಿರಿಯು ಮಹತ್ವದ ಎತ್ತರಕ್ಕೆ ಏರಲು ಅನುವಾಗುತ್ತದೆ. ದೇವ ನಿರ್ಮಿತವಾದ ಈ ಪ್ರಪಂಚವು ಮಾನವ ನಿರ್ಮಿತವಲ್ಲ. ನಮಗೆ ಕಣ್ಣು, ಕಿವಿ, ಕೈಕಾಲು, ಮೂಗು–ನಾಲಿಗೆ, ಮನ–ಬುದ್ಧಿ ಇವುಗಳಿಂದ ವಿಸ್ಮಯವಾದ ಈ ಜಗತ್ತಿನಲ್ಲಿ ಅರಿತು ಅನುಭವಿಸಿ ಆನಂದಿಸಬೇಕು. ಸಂಗ್ರಹಿಸಬಾರದು. ಕೇವಲ ಪ್ರಾಪಂಚಿಕ ವಿಷಯ ವಸ್ತುಗಳನ್ನು ಈ ಮನುಷ್ಯ ಸಂಗ್ರಹಿಸಲು ಹೋಗಿ ಅದರೊಳಗೆ ಬಂಧಿಯಾಗಿ ದುಃಖಿತನಾಗಬಾರದು ಎಂಬ ಉದಾತ್ತ ಚಿಂತನೆಯನ್ನು ಅನುಭಾವ ನಮಗೆ ಕಲಿಸಿಕೊಡಲು ಯತ್ನಿಸುತ್ತಿದೆ. ಅರಿಯದವರಿಗೆ ಈ ಪ್ರಪಂಚವು ನಶ್ವರ. ಅರಿತವರಿಗೆ ಈ ಪ್ರಪಂಚವು ಈಶ್ವರ. ದಾರ್ಶನಿಕರೂ, ಅನುಭಾವಿಗಳೂ ಆದ ಶ್ರೀಅರವಿಂದ ಮಹರ್ಷಿಗಳು ನಮ್ಮ ದಿವ್ಯಜೀವನದ ಒಳಗುಟ್ಟು ಪರಮಾತ್ಮನನ್ನು ಅರಿತಾಗ, ಪರಮ ಸತ್ಯವನ್ನು ಅಳವಡಿಸಿಕೊಂಡಾಗ, ಬಾಹ್ಯ ಸಿರಿಯ ಸಂಗ್ರಹ ನಮ್ಮ ಗುರಿಯಲ್ಲ. ಪರಮಸತ್ಯ, ಪರಮಾತ್ಮನನ್ನು ಅಂತರಂಗದಲ್ಲಿಯೇ ಅರಿತು ಆತ್ಮಾನಂದದ ಕಡಲಲ್ಲಿ ವಿಶ್ಲೇಸಿರುವುದು ನಮ್ಮ ಗುರಿ'ಎಂದಿದ್ದಾರೆ. ಶರಣರ ನುಡಿಗಡಣದ ವಿಶೇಷತೆಯೆಂದರೆ, ಲೌಕಿಕ ಜೀವನವನ್ನು ತಿರಸ್ಕರಿಸದೆ, ಪಾರಮಾರ್ಥಿಕ ಮಾರ್ಗವನ್ನು ಅಲ್ಲ ಗೆಳೆಯದೆ, ಲೌಕಿಕದ ಮೂಲಕ ಪಾರಮಾರ್ಥಿಕವನ್ನು ಸಾಧಿಸಬಹುದೆಂಬ ಸಂಗತಿಯನ್ನು ಜಗತ್ತಿಗೆ ತಿಳಿಸಿದ್ದು. ಶರಣರ ಮೌಲ್ಯಗಳು ಅವರ ರಚನೆಗಳಲ್ಲಿ ವಿಶೇಷವಾಗಿ ರೂಪುಗೊಂಡಿವೆ. ಮಾನವ ಕುಲದ ಒಳಿತಿಗಾಗಿ ಬಾಳಿದ ಅವರ ಬಾಳು ಉರಿವುಂಡ ಕರ್ಪೂರದಂತೆ. ಅವರ ಆದರ್ಶಗಳು, ಧೋರಣೆಗಳು ನಮ್ಮೆಲ್ಲರ

ಬದುಕಿನ ಆದರ್ಶವಾಗಬೇಕಿದೆ. ಪಶುಜೀವನದಿಂದ ಪ್ರಾರಂಭವಾದ ಮಾನವನ ಜೀವನ ಮಾನವೀಯ ಮಟ್ಟವನ್ನು ತಲುಪಬೇಕಿದೆ. ಇದರಿಂದ ದೈವೀ ಜೀವನಕ್ಕೆ ಮುನ್ನುಡಿ ಬರೆದಂತಾಗಿ, ಆಧ್ಯಾತ್ಮಿಕ ಜೀವನದ ಮಾರ್ಗದರ್ಶನದಿಂದ ಎಲ್ಲರಿಗೂ ತಲುಪುವಂತಾಗಬೇಕಿದೆ. ಕತ್ತಲು ಆವರಿಸಿದಾಗ, ಅದನ್ನು ಹೊಡೆದೋಡಿಸಲು ಹೇಗೆ ಬೆಳಕಿನ ಅವಶ್ಯಕತೆ ಇದೆಯೋ ಹಾಗೆ ಜನರ ಮನದ ಅಜ್ಞಾನದ ಕತ್ತಲನ್ನು ಹೋಗಲಾಡಿಸಲು ಶರಣರ, ಅನುಭಾವಿಗಳ, ವಿಭೂತಿ ಪುರುಷರ, ಮಹಾತ್ಮರ, ಜ್ಞಾನಿಗಳ ಮಾರ್ಗದರ್ಶನ ಜ್ಞಾನ ಅತ್ಯವಶ್ಯಕವಾಗಿದೆ. ಇದರಿಂದ ಅಜ್ಞಾನದಿಂದ ಸುಜ್ಞಾನದ ಕಡೆಗೆ ನಡೆಯುವಂತಾಗುತ್ತದೆ. ಮಣ್ಣನ್ನು ಹೊನ್ನನ್ನಾಗಿ ಪರಿವರ್ತಿಸುವುದೇ ಅನುಭಾವಿಗಳ ಪರಮ ಧ್ಯೇಯ. ಚಿರಂತನವಾದ ಸತ್ಯವನ್ನು ಪಡೆಯಲು ಅಶಾಶ್ವತವಾದುದರ ಮೂಲಕ ಶಾಶ್ವತವಾದುದನ್ನು ಪಡೆಯಬೇಕು. ಈ ದೇಹ ಅಶಾಶ್ವತ ಎಂದ ಮಾತ್ರಕ್ಕೆ ಅದು ತಿರಸ್ಕಾರ ಯೋಗ್ಯವಲ್ಲ. ತ್ಯಾಜ್ಯವಲ್ಲ. ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು ಎಂಬ ಶಾಶ್ವತ ಸಂದೇಶದ ಮೂಲಕ ಮರ್ತ್ಯಲೋಕದಲ್ಲಿ ಒಳಿತನ್ನೇ ಅಳವಡಿಸಿಕೊಂಡು ಬಾಳುವ ಮಾರ್ಗವನ್ನು ಶರಣರು ಜಗತ್ತಿನ ಮನಮುಟ್ಟುವಂತೆ ತೋರಿಸಿದರು. ಶರಣರು ಲೌಕಿಕ ಜೀವನವನ್ನು ಅಲ್ಲಗೆಳೆದಿಲ್ಲ. ಬದಲಾಗಿ ಆಧ್ಯಾತ್ಮೀಕರಿಸಿದರು. ಶರಣರು ಶಿವ ಸಾಯುಜ್ಯದ ಮಾರ್ಗವನ್ನು ಮತ್ತು ಭಕ್ತಿ, ಜ್ಞಾನ, ಧರ್ಮ ಮಾರ್ಗಗಳನ್ನು ಬೋಧಿಸಿದ್ದಾರೆ. ನುಡಿದಂತೆ ನಡೆದು ತೋರಿಸಿದ್ದಾರೆ. ಶರಣರು ಸಾಧಿಸಿ ತೋರಿಸಿದುದು ಭಕ್ತಿ, ಜ್ಞಾನ, ಭಗವದ್ ಅನುಭೂತಿ, ಆಧ್ಯಾತ್ಮಿಕ ಉನ್ನತಿ. ಇದು ಸರ್ವರಲ್ಲೂ ಸಾಧ್ಯ ಎಂದು ಸಾರಿದರು. ಧರ್ಮ ಪ್ರಸಾರ ಮತ್ತು ಜನಗಳಲ್ಲಿ ನೀತಿ ಬೋಧನೆ ಮಾಡಲು ವಚನ ಸಾಹಿತ್ಯ ಒಂದು ಉತ್ತಮ ಮಾಧ್ಯಮವಾಯಿತು. ಶರಣರ ಉಸಿರೇ ಈ ವಚನಗಳು ಎಂದರೆ ತಪ್ಪಾಗಲಿಕ್ಕಿಲ್ಲ. ಕೂಸಿನಿಂದ ಮುದುಕರವರೆಗೂ ಲಿಂಗ ಭೇದವಿಲ್ಲದೆ ಅರಿವಾಗುವಂತೆ ವಚನಗಳನ್ನು ರಚಿಸುವ ಮೂಲಕ ಪವಾಡ ಸದೃಶ ಕಾರ್ಯವನ್ನು ಮೆರೆದಿದ್ದಾರೆ. ವಿಗ್ರಹಾರಾಧನೆ, ದೇವಸ್ಥಾನದ ನಿರ್ಮಾಣ, ಕ್ಷುದ್ರ ದೇವತೆಗಳ ಆರಾಧನೆಗಳನ್ನು ಶರಣರು ವಿರೋಧಿಸಿದರು. ಲಿಂಗಧಾರಣೆ ಮತ್ತು ಭಕ್ತಿಯ ಅವಶ್ಯಕತೆಯನ್ನು ಸಾರಿದರು.

ಶರಣರಿಗೆ ಕಾಯಕ–ದಾಸೋಹಗಳು ಎರಡು ಕಣ್ಣುಗಳು. ಶರಣರು ಅಂದು ಬಟ್ಟೆಯನ್ನು ತೊಳೆದು, ಕಟ್ಟಿಗೆಯ ಕಡಿದು ತಂದು ಮಾರುವುದು. ಬುಟ್ಟಿ ಹೆಣೆಯುವುದು, ಬಟ್ಟೆ ನೆಯ್ಯುವುದು, ಕ್ಷೌರಿಕ ಕಾಯಕ ಮಾಡುವುದು. ಮಡಿಕೆ–ಕುಡಿಕೆ ಮಾಡುವುದು, ಕಸ ಗುಡಿಸುವುದು. ಅಕ್ಕಿಯನ್ನು ಆಯುವುದು—ಈ ಮುಂತಾದ ಕಾಯಕವನ್ನು ಭಕ್ತಿ–ಭಾವದಿಂದ ಮಾಡಿ ಉಪ ಜೀವನ ಸಾಗಿಸುತ್ತಿದ್ದರು. ಇವರೇನೂ ಸಿರಿವಂತರಾಗಿಲ್ಲದಿದ್ದರೂ ಉಪಜೀವನಕ್ಕೇನೂ ಕೊರತೆಯಿರಲಿಲ್ಲ. ಆನಂದದಿಂದ ಗುರು–ಲಿಂಗ–ಜಂಗಮರಿಗೆ ದಾಸೋಹದ ಸೇವೆಯನ್ನು ಮಾಡುತ್ತಿದ್ದರು. ಭಕ್ತಿ–ಭಾವದಲ್ಲಿ ತಲ್ಲೀನರಾಗಿ, ಭಕ್ತಿ ಪರವಶರಾಗಿ ಹಾಡು–ಕುಣಿದು, ಸ್ವರ್ಗಸುಖವನ್ನು ಅನುಭವಿಸುತ್ತಿದ್ದರು. ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ನೋಡಾ! ಎಂದವರು. ಶರಣರು ಪಾರಮಾರ್ಥಿಕ ಸುಖವು ನಿರಂತರ ಬೆಳಗುವ ಎಣ್ಣೆಯ ದೀಪದಂತೆ ಶರಣರು ಶಾಶ್ವತ ಸುಖದ ಪ್ರಾಪ್ತಿಗಾಗಿ ಧರ್ಮ ಮಾರ್ಗವಿಡಿದು ತೊಳಲದೆ– ಬಳಲದೆ ಆಚರಿಸಿ–ಪರಿಶುದ್ಧ ಬದುಕು ಸಾಗಿಸಿದವರು. ಇಲ್ಲಿ ಇರುವುದು ಅಭೇದ ಸಂಸ್ಕೃತಿ. ಇಲ್ಲಿ ಜಾತಿ ಇಲ್ಲ. ವೃತ್ತಿಪರ ಹೆಸರುಗಳಿವೆ. ಆತ್ಮಗೌರವ, ಕಾಯಕನಿಷ್ಠೆ, ಶರಣ ಸಂಕುಲದ ನಿಷ್ಠೆ. ಜಾತಿವ್ಯವಸ್ಥೆ ಮಾನವ ನಿರ್ಮಿತ. ಇಲ್ಲಿ ಜನಿಸಿದವರೆಲ್ಲ ಒಂದು. ಸತ್ಯವೇ ಈ ಧರ್ಮದ ನೆಲೆ. ಸಮೂಹ ಪ್ರಜ್ಞೆಯೇ ಇದರ ಜೀವಾಳ.

'ನಾಳೆ ಬಪ್ಪುದು ನಮಗಿಂದೇ ಬರಲಿ. "ಮರಣವೇ ಮಹಾನವಮಿ' ಎಂಬುದು ವಚನಕಾರರ ಧ್ಯೇಯ ವಾಕ್ಯವಾಗಿತ್ತು. ಶ್ರೇಷ್ಠ ಶರಣಸಾಹಿತಿಗಳಾದ

ರಂಜಾನದರ್ಗ ಅವರು ಹೇಳುವಂತೆ ವಚನಕಾರರ ವಿಚಾರವಾದವು ಬಹುದೇವೋಪಾಸನೆಯಿಂದ ಏಕದೇವೋಪಾಸನೆಯೆಡೆಗೆ, ಸ್ಥಾವರ ದೈವದಿಂದ ಇಷ್ಟಲಿಂಗದೆಡೆಗೆ, ಕರ್ಮಸಿದ್ಧಾಂತದಿಂದ ಕಾಯಕ ಸಿದ್ಧಾಂತೆದೆಡೆಗೆ, ಗುಡಿ–ಗುಂಡಾರಗಳಿಂದ ಅನುಭವ ಮಂಟಪದೆಡೆಗೆ, ಜಾತಿಬೇಧದಿಂದ ಸಮಾನತೆಯೆಡೆಗೆ, ದಾನಸಂಸ್ಕೃತಿಯಿಂದ ದಾಸೋಹ ಸಂಸ್ಕೃತಿಯೆಡೆಗೆ, ಮೂಢನಂಬಿಕೆಯಿಂದ ಪ್ರಜ್ಞಾಪ್ರಪಂಚದೆಡೆಗೆ, ರಾಜಪ್ರಭುತ್ವದಿಂದ ಪ್ರಜಾಪ್ರಭುತ್ವದೆಡೆಗೆ, ಅಸಮಾನತೆಯಿಂದ ಸಮಾನತೆಯೆಡೆಗೆ, ವ್ಯಷ್ಟಿಹಿತದಿಂದ ಸಮಷ್ಟಿಹಿತದೆಡೆಗೆ ಸಾಗುವುದೇ ಆಗಿತ್ತು. ಒಟ್ಟಿನಲ್ಲಿ ವಚನಕಾರರು ಧಾರ್ಮಿಕ ಆಧ್ಯಾತ್ಮಿಕ ಸಾಮಾಜಿಕ ಎಲ್ಲ ರಂಗಗಳಲ್ಲಿ ವೈಚಾರಿಕತೆಯನ್ನು ಮೆರೆದು ಸಮಾನತೆಯ ಸುಖೀ ಸಮಾಜ ನಿರ್ಮಾಣಕ್ಕೆ ಮಾನವ ಕಲ್ಯಾಣಕ್ಕೆ ಅದ್ಭುತ ಕಾಣಿಕೆ ಕೊಟ್ಟಿರುವುದನ್ನು ಕಾಣುತ್ತೇವೆ.

ಕಣ್ಣಿಗೆ ಕಾಣುವ ಇಡೀ ಸೃಷ್ಟಿ ಈ ಜಗತ್ತು ಪರಮಾತ್ಮನ ಪ್ರಯೋಗಶಾಲೆ. ಇಲ್ಲಿ ಬಂದವರೆಲ್ಲರೂ ಈ ಸೃಷ್ಟಿಯ ಸಕಲ ಜೀವರಾಶಿಗಳೊಂದಿಗೆ ಬೆರೆತು ಇಲ್ಲಿಯ ನೆಲ, ಜಲ, ಪದಾರ್ಥಗಳೊಂದಿಗೆ ಬಾಳಬೇಕಾಗುತ್ತದೆ. ಇವೆಲ್ಲವೂ ವಿಶ್ವಚೈತನ್ಯವಾದ ಕೊಡುಗೆಗಳಾಗಿವೆ. ಇವೇ ಅಂತಿಮವಾದ ಧ್ಯೇಯ ವಸ್ತುಗಳು. ಇವುಗಳಾಚೆ ಮಾನವ ಜೀವನ ಸಾರ್ಥಕವಾಗಬೇಕಾದರೆ ಅಮೂಲ್ಯವಾದ ಜ್ಞಾನವನ್ನು ಪಡೆಯಬೇಕು.

ಶರಣರ ಕೆಲವು ವಚನಗಳು ವಜ್ರದ ಕಡಲೆಯಂತಿರುವೆ. ಅವುಗಳನ್ನು ಕಡಿಯುವುದೇ ಕರಕಷ್ಟದಾಯಕವಾಗಿವೆ. ಆದರೆ ಬಲ್ಲವರು ಅನುಭಾವವೆಂಬ ಹಲ್ಲುಗಳಿಂದ ಕಡಿದು ಆರುವೆಂಬ ಜೀರ್ಣಶಕ್ತಿಯಿಂದ ಅರಗಿಸಿಕೊಳ್ಳಬಲ್ಲವರು. ಸರ್ವರಲ್ಲಿ ಸರ್ವದರಲ್ಲಿ ಆ ಸರ್ವೇಶ್ವರನ ಕಂಡು ಆನಂದದಿ ತೇಲಾಡುವವರು. ಸರ್ವಸಂಗ ಪರಿತ್ಯಾಗಿಯಾದ ಚಿದ್ ವಸ್ತು ಸ್ವರೂಪಿಗಳು ಜಗಕಲ್ಯಾಣ ಜನಕಲ್ಯಾಣಕ್ಕಾಗಿ ತಮ್ಮಯ ತಪಃಶಕ್ತಿಯನ್ನು ಬಳಸಿ ಬೆಳೆಸುವರು. ಅಂದರೆ ಇವರು ಪರಿಪೂರ್ಣರೆಂದರ್ಥ. ನರನಲ್ಲಿ ನಾರಾಯಣನ ಕಾಣುವ ಒಳನಯನ ತೆರೆದವರು. ನರಜನ್ಮಕ್ಕೆ ಬಂದು ನರಕಕ್ಕೆ ಗುರಿಯಾಗದ ಗುರಿಯ ಸಾಧಿಸಿ ತಮ್ಮಯ ಗುರಿಯ ಮುಟ್ಟಿದವರು.

ಕಾಯಕವೇ ದೇವಾಯಲವೆಂಬ, ಅಂತರಂಗದ ಬೆಳಕೆ ಶಿವನೆಂಬ, ಕಾಯಕವೇ ಶಿವಪೂಜೆಯೆಂಬ ಶರಣ–ಶರಣೆಯರ ಬೋಧೆಯು ದೇಶಕಾಲಾತೀತವಾದ ಶಾಶ್ವತ ಸತ್ಯವಾಗಿದೆ. ಪ್ರಪಂಚವನ್ನು ಪರಿತ್ಯಾಗ ಮಾಡಿ ಅರಣ್ಯವನ್ನು ಸೇರುವುದು ಧರ್ಮವಲ್ಲ. ಪ್ರಪಂಚದಲ್ಲಿದ್ದು, ಜನಸೇವೆಯಲ್ಲಿ ಆತ್ಮಾರ್ಪಣೆಯನ್ನು ಮಾಡುವುದೇ ಶ್ರೇಷ್ಠತರವಾದ ಧರ್ಮವೆಂತಲೂ ಸ್ಥಿರತರವಾದ ಮೋಕ್ಷವೆಂತಲೂ ಈಗಿನ ಜಗದ್ವಂದ್ಯ ತತ್ತ್ವಜ್ಞಾನಿಗಳು ಹೇಳುತ್ತಾರಲ್ಲವೇ?

ಜೀವನವೆಂಬುದು ಒಂದು ತೆರೆದಿಟ್ಟ ಪುಸ್ತಕ. ಮೊದಲ ಮತ್ತು ಕೊನೆಯ ಪುಟಗಳನ್ನು ಆ ಪರಮಾತ್ಮ ಬರೆದಿಟ್ಟದ್ದಾನೆ. ಅದುವೇ ಹುಟ್ಟು ಮತ್ತು ಸಾವು, ಇವುಗಳ ನಡುವಿನ ಜೀವನ ಸಾರ್ಥವಾಗಬೇಕಾದರೆ ಮಹಾತ್ಮರ ಬಸವಾದಿ ಶರಣರ ನುಡಿಮುತ್ತುಗಳನ್ನು ಕೇಳಿ ಹುಟ್ಟು–ಸಾವಿನ ಪುಟಗಳ ಅರ್ಥವನ್ನು ಬಾಳಿನಲ್ಲಿ ಸಮೃದ್ಧಗೊಳಿಸಬೇಕಾದುದು ನಮ್ಮೆಲ್ಲರ ಜವಬ್ದಾರಿಯಾಗಿದೆ. “ಅರಿತು ಬಾಳಿದರೆ ಬಾಳು ಬಂಗಾರ” ಮರೆತು ಬಾಳಿದರೆ ಬಾಳು ಬಂಧನಕಾರಿ”. ಅರಿತು–ಆಚರಿಸುವುದು ಶರಣರ ನಿಲುವಾಗಿತ್ತು.

ಹನ್ನೆರಡನೇ ಶತಮಾನವನ್ನು ಬಸವಯುಗ ಎಂದಿರುವುದಾಗಲೀ, ಆ ಕಾಲದ ಚಿಂತನೆಯನ್ನು ಬಸವಪ್ರಜ್ಞೆಯೆನ್ನುವುದಾಗಲೀ, ಇಂಥ ತಿಳುವಳಿಕೆಯನ್ನು ಬಸವ–ಜ್ಞಾನ ಎಂದೆನ್ನುವುದಾಗಲೀ ಯಥೋಚಿತವಾಗಿದೆ. ಪ್ರಶ್ನಾಧೀನ ಮತ್ತು ಪ್ರಶ್ನಾತೀತವೆನ್ನುವ ಸಾಂಸ್ಕೃತಿಕ ಪರಿವೇಷವನ್ನು ಪ್ರಶ್ನಾರ್ಹವೆಂಬ ಸಾಮಾಜಿಕ ಪರಿವೇಷಕ್ಕೆ ಪರಿವರ್ತಿಸಿ ಒಂದು ನೂತನ ಮತ್ತು ಅರ್ಥಪೂರ್ಣ

ಚಿಂತನಾ ವಿಧಾನವನ್ನು ರೂಪಿಸಿಕೊಟ್ಟಿದ್ದು ಹನ್ನೆರಡನೇ ಶತಮಾನದ ಬಸವಾದಿ ಶರಣರಿಂದ ಆಯಿತು ಎಂಬುದು ಮಹತ್ವದ ಅಂಶವಾಗಿದೆ.

ಶರಣರು ದೇಹಕ್ಕೆ ಮತ್ತು ಬದುಕಿಗೆ ಮಹತ್ವ ಕೊಟ್ಟರು. ದೇಹವೇ ದೇವಾಲಯ ಎಂದು ಆಚರಣೆಗೆ ತಂದರು. ಕಾಯ ನಶ್ವರವಲ್ಲ.ಅದನ್ನು ಸತ್ಯ, ಶುದ್ಧ ಕಾಯಕಕ್ಕೆ ತೊಡಗಿಸಿಕೊಳ್ಳಬೇಕೆಂದು ಕಾಯಕಕ್ಕೆ ಕಾಯವೇ ಮೂಲಾಧಾರವೆಮದರು. ದೇಹವೇ ದೇವಾಲಯವೆಂದ ಶರಣರು ಪ್ರಸಾದ ಕಾಯವಿದನು ಕೆಡಿಸಲಾಗದು ಆರೋಗ್ಯ ಕಾಪಾಡಿಕೊಂಡು ಕಾಯಕದಲ್ಲಿ ನಿರತನಾಗುವುದೇ ಪರಮ ಭಾಗ್ಯ. ಶರಣರು ಬದುಕಿನ ಅನೇಕ ವಾಸ್ತವ ಸತ್ಯಗಳನ್ನು ಜನಮನಕ್ಕೆ ಹತ್ತಿರವಾಗಿಸಿದರು. ಕಾಯಕ, ಭಕ್ತಿ, ದಾಸೋಹ, ಅನುಭಾವ ಈ ಹೊಸ ಸಂಸ್ಕೃತಿಗೆ ಸಾಕ್ಷಿಯಾದರು.

ಶರಣರು ಹೇಳುವ ಅನುಭಾವವು ಸಮಗ್ರ ಸಮಾಜದ ಸುಧಾರಣೆಯ ಚಿಂತನೆಯ ಕೇಂದ್ರದಲ್ಲಿರುವ ಆಧ್ಯಾತ್ಮಿಕ ಚಿಂತನೆಯಾಗಿದೆ, ಆತ್ಮಾನಂದ ಆತ್ಯಂತಿಕ ಸ್ಥಿತಿಯನ್ನು ಅದು ಹೇಳುತ್ತದೆ. "ಅನುಭಾವವು ಅಂತರಂಗದ ರತ್ನ" ವೆಂದಾದಾಗ ಅದು ಸುಲಭ ಸಾಧ್ಯವಲ್ಲವೆಂದೂ ಶರಣರು ಅನುಭಾವಕ್ಕೆ ಕೊಡುವ ಅರ್ಥಗಳು ಅನುಭವ ಜನ್ಯವಾಗಿರುವುದರಿಂದಲೇ ಅದು ಸಾಪೇಕ್ಷಿತ ನೆಲೆಯಲ್ಲಿ ಗುರುತಿಸಲ್ಪಟ್ಟಿದೆ. ಶಬ್ದದಲ್ಲಿ ನಿಶ್ಯಬ್ದವನ್ನು, ರೂಪದಲ್ಲಿ ಅರೂಪವನ್ನು ಮೂರ್ತದಲ್ಲಿ ಅಮೂರ್ತವನ್ನು ಕಾಣುವ ಅಥವಾ ಕಂಡಿರುವ ಅಚಿಂತ್ಯ ಶಕ್ತಿಯನ್ನು ವಿವರಿಸುವುದು ಹೇಗೆ? ಅಲೌಕಿಕವಾಗಿ ಇದು ಲೋಕಾತೀತವೂ ಕಾಲಾತೀತವೂ ಆಗಿ ತನ್ನನ್ನು ಕಂಡುಕೊಳ್ಳಲು ಸಾಧ್ಯವಾಗಿರುವ ಆಧ್ಯಾತ್ಮಿಕ ಬದುಕಿನ ವಿಧಾನವೂ ಆಗಿರಬಹುದಲ್ಲವೇ? ಇದು ಸ್ಥೂಲ, ಸೂಕ್ಷ್ಮ, ಕಾರಣ, ಮಹಾಕಾರಣಗಳ ಹಂತವನ್ನು ದಾಟುವ ಒಂದು ಸ್ಥಿತಿ. ಅನುಭವವೆಂಬುದು ಇಂದ್ರಿಯಗಳಿಗೆ ನಿಲುಕುವ ಅಥವಾ ಇಂದ್ರಿಯಗಳಿಂದಲೇ ಪಡೆಯುವ ಸ್ಥಿತಿ. ಆದರೆ ಅನುಭಾವವು ಇಂದ್ರಿಯಾತೀತವಾಗಿರುವುದರಿಂದ ಇಂಥ ಅನುಭವವನ್ನು ದಕ್ಕಿಸಿಕೊಳ್ಳುವುದು ಹೇಗೆ?

ಹೀಗೆ ಶರಣರ ಪ್ರಣೀತವಾದ ಜ್ಞಾನವು 12ನೇ ಶತಮಾನದಲ್ಲಿ ರೂಪಗೊಂಡು ಆಧುನಿಕ–ಅತ್ಯಾಧುನಿಕ ಕಾಲದವರೆಗೂ ನಮ್ಮ ವೈಚಾರಿಕ ನೆಲೆಯನ್ನೂ ವಿಶೇಷವಾಗಿ ರೂಪಿಸಿ, ಕಾಲಗತಿಗೆ ಕಾರಣವಾಗಿ ಯುಗಪ್ರವರ್ತನಶೀಲ ಗುಣವನ್ನು ಪಡೆದಿರುವ ಈ ಜ್ಞಾನವು ವ್ಯಕ್ತಿಯೊಬ್ಬನನ್ನು ತತ್ತ್ವವಾಗಿ, ಮಂತ್ರವಾಗಿ, ವಿಚಾರವಾಗಿ ಜೀವಂತವಾಗಿಡುವ ಬಗೆಯೂ ಇದಾಗಿದೆ.

**ಪರಾಮರ್ಶನ ಗ್ರಂಥಗಳು**


- ದೇಜಗೌ. *ಬಸವ ವಿಚಾರಧಾರೆ.* ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ.
- ಕಲಬುರ್ಗಿ, ಎಂ.ಎಂ. (1970). *ಶಾಸನಗಳಲ್ಲಿ ಶಿವಶರಣರು.* ವೀರಶೈವ ಅಧ್ಯಯನ ಸಂಸ್ಥೆ. ಜೆಟಿ.ಮಠ
- ಕಲಬುರ್ಗಿ, ಎಂ.ಎಂ. (ಸಂ.). *ಶರಣಶ್ರೀ–ಅಭಿನಂದನ ಗ್ರಂಥ.* ಮುರುಘಾಮಠ
- ರಂಜಾನದರ್ಗಾ. *ಲಿಂಗವಂತ ಧರ್ಮದಲ್ಲಿ ಏನುಂಟು ಏನಿಲ್ಲ?.* ಲಡಾಯಿ ಪ್ರಕಾಶನ.
- ತಿಪ್ಪೇರುದ್ರಸ್ವಾಮಿ,ಎಚ್. ಶರಣರ ಅರಿವು. ಆಚರಣೆ.
- ತಿಪ್ಪೇರುದ್ರಸ್ವಾಮಿ,ಎಚ್. *ಶರಣರ ಅನುಭಾವ ಸಾಹಿತ್ಯ.* ಪುಟ.181